— ವಾರದ ಸಂಚಿಕೆ

Reg No. M 1299 (Founded 1917) Daily & Weekly

ಸತ್ಯವಾದಿ

SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 169] ಸೋಮವಾರ 26—3—45 [6 ಪೈ

218(೨೫)

ಮೂ – ಗಲ್ಲಿಗೇರಿಸುವ ಶಿಕ್ಷೆ

ಜಾರ್ಜ್ ಬರ್ನಾರ್ಡ್‌ಷಾರವರು ಲಂಡನ್ನಿನಲ್ಲಿ ನಡೆದ ಒಂದು ಖೂನೀ ಕೇಸಿನಲ್ಲಿ ತಪ್ಪಿತಸ್ಥರಿಗೆ ಗಲ್ಲಿಗೇರಿಸುವ ಶಿಕ್ಷೆಯು ವಿಧಿಸಲ್ಪಟ್ಟ ಸಂದರ್ಭದಲ್ಲಿ ಸಾಮಾನ್ಯವಾಗಿ ಈ ಶಿಕ್ಷೆಯನ್ನು ಕುರಿತು ಬರೆಯುತ್ತಾ, "ಹತ್ಯವಾಡಿದವರೇ ಶಿಕ್ಷೆ, ಅಂಥಾ ತಾರದವರು ಮುಟ್ಟಿರೆಲ್ಲ ರೂ ಕೊನೆಗಾಣಿಸಲ್ಪಡಬೇಕಾದವರೇ ಬುದ್ಧಿಹೀನರು. ಕೂಡ ಸಹಿಸಲಾರದವರು ಇಂಥಹವರನ್ನು ಕೊನೆಗಾಣಿಸುವದು ಅಡಚಣೆಯನ್ನು ತೆಗೆಯುವಿಕೆಯೆ" ಎಂಬೀ ಬಗೆಯಲ್ಲಿ ಬರೆದಿರುವರು.

ಜಾರ್ಜ್ ಬರ್ನಾರ್ಡ್‌ಷಾರವರು ವೇಳಾಪತ್ರಗಳು ಹೌದಾಗಲಿ ಅವರ ವೇಧಸ್ಸನ್ನು ಕೂಡ ಪರಿಪೂತವಾದದ್ದೇ ಇವರು ಬುದ್ಧಿಹೀನರು ಎಂದು ನಿರ್ಣಯಿಸುವಂಥವರು ಯಾರು ? ರಾಜ್ಯಾಂಗವೇ ಸಂಘವೇ ? ಶಾಸ್ತ್ರಜ್ಞರೇ ?

ವೆದಳು ಎಲ್ಲರಿಗೂ ತಲೆಯಲ್ಲಿರುವದಿಲ್ಲ. ಚದುರಿನ ಆಟದಲ್ಲಿ ಪ್ರವೀಣನಾದವನಿಗೆ ಕಾಲಿನ ಹೆಬ್ಬರಳಿನಲ್ಲಿರುತ್ತದೆ. ಚಿತ್ರಗಳನ್ನು ಬರೆಯುವವನಿಗೆ ಬೂರಸನ್ನು ಹಿಡಿದುಕೊಳ್ಳುವ ಬೆರಳಿನಲ್ಲಿರುತ್ತದೆ ಎಂಬೀ ರೀತಿಯಲ್ಲಿ ಷಾರವರೇ ನುಡಿದಿರುವರು.

ನಾವು ಸೃಷ್ಟಿಸಲಾಗದ ವಸ್ತುಗಳನ್ನು ನಿರ್ಮೂಲ ಮಾಡುವಿಕೆಯು ಯೋಗ್ಯವಾದ ಕೆಲಸವಲ್ಲವೆಂದು ಅನೇಕರು ಅಭಿಪ್ರಾಯಪಡುವರು. ಷಾರವರು ಮೇಲ್ಕಂಡ ಅಭಿಪ್ರಾಯದೊಂದಿಗೆ ಅನೇಕರು ವಿಕೀಭವಿಸುವದಿಲ್ಲ.



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು.

ಗಾಂಧೀಜೀ ಬಂಗಾಳಾಕ್ಕೆ ಬರಬಾರದಂತೆ

ಗಾಂಧೀಜಿಯವರು ಬಂಗಾಳಾಕ್ಕೆ ಭೇಟಿ ಕೊಡುವ ವಿಷಯದಲ್ಲಿ ಅಲ್ಲಿಯ ಮಂತ್ರಿಮಂಡಲವು ವಿರುದ್ಧವಾಗಿರುವುದಂತೆ. ಅವಶ್ಯಕವಾದಲ್ಲಿ ಗಾಂಧೀಜೀ ಬಂಗಾಳಾಕ್ಕೆ ಬಾರದಂತೆ ಪ್ರತಿಬಂಧಕಾಜ್ಞೆಯನ್ನು ಕೂಡ ಮಂತ್ರಿಮಂಡಲವು ಹೊರಡಿಸಬಹುದೆಂದು ಕಲ್ಕತ್ತಾದ ಒಂದು ಪತ್ರಿಕೆ ಪ್ರಕಟಿಸಿದೆ.

ಇಂಗ್ಲೆಂಡಿನಲ್ಲಿ ಅಕ್ಕಿ ಮತ್ತು ಹಾಲನ್ನು ಅಂಗಡಿಗಳಲ್ಲಿ ಮಾರುವುದನ್ನು ಮನ್ನಾ ಮಾಡಲಾಗಿದೆ.

ಭಾರತೀಯರು ಅಮೇರಿಕಾದಲ್ಲಿ ನೆಲೆಸಲು ಅಡ್ಡಿಪಡಿಸುವ ಮಸೂದೆಯನ್ನು ತಿದ್ದುಪಡಿ ಮಾಡಲು ಪ್ರೊ|| ರೂಸ್ವೆಲ್ಟರು ಮತ್ತೆ ಕಾಂಗ್ರೆಸ್ ಸದಸ್ಯರನ್ನು ಮತ್ತೆ ಕೇಳಿರುವರು.

ಅಮರೋಪಿಯಲ್ಲಿ ಎರಡು ಕಾಗೆಗಳು ತಿಂಗಳಿಗೆ 6—7 ಸಾರಿ ಬಂದು 'ಸ್ವರಾಜ್ಯ, ಸ್ವರಾಜ್ಯ' ಎಂದು ಕೂಗುವುವು. ಇದನ್ನು ಯಾರು ಬೇಕಾದರೂ ಪರೀಕ್ಷಿಸಬಹುದೆಂದು ಶ್ರೀ ಬಿ. ಎಸ್. ಕಾಡುರವರು ತಿಳಿಸಿರುತ್ತಾರೆ.

ಪತ್ನಿ ಸಮೇತರಾಗಿ ಬ್ರಿಟನ್ನಿಗೆ ವಿಂಡಸರ್ ದಂಪತಿಗಳು ಬಂದರೆ ಅವರಿಗೆ ಯಾವ ಅಡ್ಡಿಯನ್ನು ಚಕ್ರವರ್ತಿಗಳಾಗಲಿ ಇಲ್ಲವೆ ಮಂತ್ರಿಗಳಾಗಲಿ ಆಕ್ಷೇಪಪಡಿಸುವುದಿಲ್ಲವಂತೆ. ಜಾರ್ಜ್ ಚಕ್ರವರ್ತಿಗಳ ಸ್ಥಾನಗಟ್ಟಿಯಾಗಿದೆಯಂತೆ.

ಮಿ|| ಚರ್ಚಿಲ್ಲರ ಪುತ್ರಿ ಸಾರಾರನ್ನು ಪರಿತ್ಯಾಗಮಾಡಲು ಆಕೆಯ ಗಂಡನು ಕೋರ್ಟಿಗೆ ಅರ್ಜಿ ಸಾಕಿರುವನು. ವಿಚಾರಣೆ ಬುಧವಾರ ಲಂಡನ್ನಿನಲ್ಲಿ ನಡೆಯುವುದು.

ಕನ್ನ ಪ್ರಾಂತ್ಯದಲ್ಲಿ ಲಂಚವು ಸಂಪೂರ್ಣವಾಗಿ ನಿಲ್ಲುವವರೆಗೂ ತಾನು ಸುಮ್ಮನೇ ಕೂಡುವುದಿಲ್ಲವೆಂದು ಕೆಷ್ಟಾವರಿನ ಅಸೆಂಬ್ಲಿಯಲ್ಲಿ ಡಾ|| ಖಾಕ್ ಸಾಹೇಬರು ಹೇಳಿದರು.

ವೆಸ್ಟ್ ಇಂಡೀಸ್ ಕ್ರಿಕೆಟ್ ಆಟಗಾರನೊಬ್ಬನು ಇಂಗ್ಲೆಂಡಿನ ಜಿಸ್ಟರ್‌ನಲ್ಲಿ ಡ್ಯಾನ್ಸ್ ಮಾಡಲು ಹೋದಾಗ ಬ್ರಿಟಿಷ್ ಪೋಲೀಸರಿಂದ ಅರ್ಧಚಂದ್ರ ಪ್ರಯೋಗಮಾಡಲ್ಪಟ್ಟು ಹಿಂದಿರುಗಿದನು.

ಒಬ್ಬ ಸಿನಿಮಾನಟಿಯ ವಿಚಿತ್ರ ವಿಷಯ

ಹೋಲಿವುಡ್‌ನಲ್ಲಿ ಓಲ್ಗ ಪೆಟ್ರೋವ್ ಎಂಬ ಸಿನಿಮಾತಾರೆಯು ಲೋಕವಿಖ್ಯಾತವಾದವಳು. ಈಗ ಈಕೆಯು ವಿಶ್ರಾಂತಿ ಪಡೆಯುತ್ತಿರುವಳು. ಇವಳ ರೂಪನ್ನು ನೋಡಿ ಪ್ರೊಡ್ಯೂಸರ್ ಮೂಬಟ್ಟೆ ಬೆರಗಾದನು. ಇಂಥಾ ತಾರೆಯನ್ನು ತಾನು ಇದುವರೆಗೂ ನೋಡಿಲ್ಲವೆಂದಿರುವನು. ಈಕೆಯು ಈಗ 17 ವರ್ಷಗಳಿಂದ ಮುಖವನ್ನು ನೀರಿನಿಂದ ತೊಳೆದಿಲ್ಲ. ಇವಳು ಮುಖವನ್ನು ತಣ್ಣಗಿರುವ ಕೆನೆ (ಕೋಲ್ಡ್ ಕ್ರೀಮ್) ಯಿಂದ ಮಾತ್ರ ಉಜ್ಜಿಕೊಳ್ಳುತ್ತಿದ್ದಳು. ಸ್ನಾನ ಮಾಡುವಾಗ ತಲೆ ಬಿಟ್ಟು ಶರೀರದ ಇತರ ಭಾಗಗಳ ಮೇಲೆ ನೀರನ್ನು ಉಪಯೋಗಿಸುತ್ತಿದ್ದಳು. ಇವಳು ಲಗ್ನವಾದವಳಲ್ಲ. ಒಬ್ಬನನ್ನು ಮೋಹಿಸಿ ಲಗ್ನವಾಗುವುದರಲ್ಲಿದ್ದಳು. ಇವನಿಗೆ ಲಗ್ನವಾಗಿದೆಯೆಂದು ತಿಳಿದು ಆಕಾಭಂಗವಾಗಿ ಪ್ರಾಣ ತ್ಯಾಗ ಮಾಡಬೇಕೆಂದಿದ್ದಳು. ಈಜಿಗೆ ಒಬ್ಬರು ಸಾಬೂನು ತಯಾರಿಗಾರರು ಆಕಾಶವಾಣಿಯಲ್ಲಿ ಸಾಬೂನಿನ ಮಹತ್ವವನ್ನು ತಿಳಿಸಿದರು. ಇದನ್ನು ಕೇಳಿದ ನಂತರ ಈಕೆಯು ಮುಖಕ್ಕೆ ಸಾಬೂನನ್ನು ಉಜ್ಜಿ ನೀರಿನಿಂದ ಮುಖ ತೊಳೆದುಕೊಳ್ಳುತ್ತಿರುವಳು.

ಮುಂಬಯಿನಲ್ಲಿ ರಾತ್ರಿ ಕಾಲದಲ್ಲಿ ವಾಠಶೇಳಲು ಕಾಲೇಜ್ ಏರ್ಪಾಡಾಗಿದೆ. ಪ್ರೊ|| ವಾಡಿಯಾರವರು ಇದಕ್ಕೆ ಛೇರ್‌ಮ್ಯಾರಾಗಿರುವರು.

ಸೈಬೀರಿಯಾದಲ್ಲಿ ಚಳಿಗಾಲದಲ್ಲಿ ಹಾಲನ್ನು ಇಟ್ಟಿಗೆ ಮಾಡಿ ಮಾರುವರು.

ಕ್ಯಾಲಿಫೊರ್ನಿಯಾದಲ್ಲಿರುವ ಪೀಡಿಂಗ್ಸ್ ನಗರದಲ್ಲಿರುವ ಚಿನ್ನದ ಗಣಿ ಪ್ರಾಂಸಭೆಯು ಆಡಳಿತದಲ್ಲಿದೆ.

ಆಕಾಶವಾಣಿ 27—3—45

ವೃತ್ತಾಂತ ಬೆಳಿಗ್ಗೆ 8-50, ಮುದ್ರಾಹ್ನ 2-50, ಸಾ. 6.30, 7.30, ರಾತ್ರಿ 10, ಬಿ. 8 ಹಾಡುಗಾರಿಕೆ. 8-25 ಗೋಟ್ಟು ವಾದ್ಯ ಮು. 2-20 ಕ್ಲಾರಿಯೋನೆಟ್. ಸಾ. 6 ಮೇಳವಾದ್ಯ. 6-45 ಹಳ್ಳಿಯ ವರಿಷಾಗಿ. ರಾ. 8 ತುಮ್ರಿವಾದ್ಯ ಭಾಷಣ. 8-15 ನೇಣುವಾದನ.

ವಾರ್ತಾತರಂಗ

ಭಾರತದಲ್ಲಿ ಎಲ್ಲೂ ಇಲ್ಲದ ವ್ಯವಸಾಯದ ಇಕ್ಕಟಂಟ್ಯಾಕ್ಸ್ ಮದರಾಸಿನಲ್ಲಿ ಜಾರಿಗೆ ಬರುವುದು.

ಮದರಾಸಿನಲ್ಲಿ ಎಲೆಕ್ಟ್ರಿಕ್ ಒಲ್ಲು ಮತ್ತು ಥರ್ಮೋಫ್ಲಾಸ್ಕನ್ನು ಮಾರಲು ನಿರಾಕರಿಸಿದ ಒಬ್ಬ ವ್ಯಾಪಾರಿಗೆ ರೂ. 11100 ಜುಲ್ಮಾನೆಯಾಯಿತು.

ವೋಲಿವ್ ಸರ್ಕಾರದ ವಿಚಾರದಲ್ಲಿ ತ್ರಿಮೂರ್ತಿಗಳಲ್ಲಿ ತಿಕ್ಕಾಟ ಉಂಟಾಗಿದೆ.

ಸ್ಯಾನ್‌ಫ್ರಾನ್ಸಿಸ್ಕೋ ಸಮೇಳನದಲ್ಲಿ ಪ್ರತಿಯೊಂದು ಜನಾಂಗಕ್ಕೂ ಒಂದೇ ಓಟು.

ಭಾರತದಲ್ಲಿ ತಂತೀವರ್ತಮಾನದ ದರ ಹೆಚ್ಚಿತು. ಮೊದಲು 8 ಮಾತಿಗೆ 1 ಆಣೆ, ಮುಂದಿನ ಪ್ರತಿ ಮಾತಿಗೂ 1 ಆಣೆ. ಅರ್ಜೆಂಟ್ ಟೆಲಿಗ್ರಾಂಗಳಿಗೆ ಇದರ ಎರಡರಷ್ಟು.

ಬ್ರಿಟಿಷ್ ವಿಜ್ಞಾನಿಯೊಬ್ಬನು ಒಂದು ತರಹ ಕಾಜನ್ನು ತಯಾರ್ಮಾಡಿರುವನು. ಇದೆನ್ನು ಕಿಟಕಿಗಳಿಗೆ ಉಪಯೋಗಿಸಿದರೆ, ಮನುಷ್ಯನು ಬಿಡುವ ಕೆಟ್ಟ ಗಾಳಿಯನ್ನು ಓಡಿಸುವುದು. ಸೊಣ ಸೊಳ್ಳೆ ಇವುಗಳು ಆ ಗಾಜಿನ ಒಳ ಬಂದಕೂಡಲೇ ಸಾಯುವುವು. ಮೈಸೂರು ಪೌರಸಭೆಯವರು ಈ ಗಾಜನ್ನು ತರಿಸಿ, ರಾಜಾರಾಂ ಅಗ್ರಹಾರದ ನಿವಾಸಿಗಳಿಗೆ ಹಂಚಿದರೆ ಮಹದುಪಕಾರವಾಗುವುದು.

ನಾಜಿಗಳ ಕೈಲಿ ಬೈದಿಯಾಗಿದ್ದು ಈಗತಾನೇ ಭಾರತಕ್ಕೆ ಹಿಂದಿರುಗಿದ 15 ಭಾರತೀಯ ಸೈನಿಕರು ನಾಜಿಗಳು ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆಂದು ಹೇಳಿರುವರು.

ಮದರಾಸಿನ ಶೇಂದಿ ಅಂಗಡಿಗಳ ಹರಾಜಿನಿಂದ ಸರ್ಕಾರಕ್ಕೆ 1 ಕೋಟಿ ರೂಪಾಯಿಗಿಂತ ಹೆಚ್ಚಾಗಿ ಉತ್ಪತ್ತಿಯಾಗಿದೆ.

ಭಾರತದಲ್ಲಿ ಕೆಲಸಮಾಡಲು ಆಸ್ಟ್ರೇಲಿಯಾ ಸ್ತ್ರೀಯರು ಇಷ್ಟರಲ್ಲೇ ಬರುವವರಾಗಿರುವರು.

ಇಂಗ್ಲೆಂಡಿನಲ್ಲಿ ತಯಾರಾದ ಬೈಸಿಕಲ್ಲುಗಳ ಕ್ರಯ ಭಾರತದ್ದಕ್ಕಿಂತ ಶೇಕಡಾ 50 ರಷ್ಟು ಕಮ್ಮಿಯಾದ್ದರಿಂದ ಕೇಂದ್ರ ಸರಕಾರವು ಬ್ರಿಟಿಷ್ ಸೈಕಲ್ಲುಗಳನ್ನು ಕೊಳ್ಳಬೇಕಾಯಿತಂತೆ.

500 ವರ್ಷಗಳಿಂದ ಡಾರ್ಡನಲ್ಸ್ ಜಲಸಂಧಿಯು ತುರ್ಕಿಯ ಅಧೀನದಲ್ಲಿದ್ದು ಯುದ್ಧಕಾಲದಲ್ಲಿ ಯಾವ ಯುದ್ಧನೌಕೆಗಳೂ ಓಡಾಡುವುದಕ್ಕೆ ಅಡಚಣೆಯಾಗಿದ್ದಿತು. ಈಗ ರಷ್ಯಾಕ್ಕೆ ಇಲ್ಲಿಂದ ಸಾನುಗ್ರಿ ಕಳುಹಿಸುವ ಹಕ್ಕು ದೊರೆತಿತು.

ಈ ವರ್ಷ ಮುಂಬೈ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂತವರು 33500 ಮಂದಿ. ಇಷ್ಟು ಮಂದಿ ಹಿಂದೆ ಯಾವ ವರ್ಷದಲ್ಲೂ ಕೂತಿರಲಿಲ್ಲ.

1943-44 ರಲ್ಲಿ ಭಾರತಕ್ಕೆ ಅಮೇರಿಕಾದಿಂದ 8000 ಸೈಕಲ್ಲುಗಳು ಆಮದಾದುವು.

ವೈಸರಾಯರು ಲಂಡನ್ನಿಗೆ ಪ್ರಯಾಣಮಾಡಿದ್ದು ಭಾರತಕ್ಕೆ ಡೊಮಿನಿಯನ್ ಸ್ಟೇಟನ್ನು ಕೊಡಿಸುವುದಕ್ಕೆಂದು ಪಿಪಲಿಯಲ್ಲಿ ಊಹಿಸಲಾಗಿದೆ.

ಲಾರ್ಡ್ ವೇವಲರು ಭಾರತಕ್ಕೆ ಮತ್ತೆ ವೈಸರಾಯರಾಗಿ ಬರುವುದಿಲ್ಲವೆಂದೂ, ಲಾರ್ಡ್ ಲೂಯಿ ಮೌಂಟ್‌ಬ್ಯಾಟನರ ಕೆಲಸವನ್ನು ಮುಂದುವರಿಸಿಕೊಳ್ಳುವರೆಂದೂ, ಲಾರ್ಡ್ ಪೆಥಿಕ್ ಲಾರೆನ್ಸ್‌ರು ಭಾರತದ ವೈಸರಾಗುವರೆಂದೂ ಲಂಡನ್ನಿನಲ್ಲಿ ಹೊಲವಾದ ಸದಂತೆ ಹಬ್ಬಿದೆ.

ಆದೇಕರು ತಿಳಿದಿರುವಂತೆ ಜಪಾನ್ ಚಿಕ್ಕ ಚಿಕ್ಕ ದ್ವೀಪಗಳ ಸಮೂಹವಲ್ಲ. ಅಥವಾ ಕಾಗದಗಳಿಂದ ಕಟ್ಟಿದ ಮನೆಗಲ್ಲ. ಈಗ ಎರಡು ವರ್ಷಗಳಿಂದ ಒಟ್ಟು ನಿಧಿ ನಿಕ್ಷೇಪ ಸಿಕ್ಕಿದೆ. ತನ್ನ ಬುಡವನ್ನು ಭದ್ರಪಡಿಸಿಕೊಂಡಿದೆ. ತನ್ನದೇ 730 ಸಾವಿರ ಚದರ ಮೈಲಿ ರಾಜ್ಯದಲ್ಲಿ ಕೈಗಾರಿಕೆ, ವ್ಯವಸಾಯ, ಉತ್ಪತ್ತಿ ಪಡಿಸಿಕೊಂಡಿದೆ. ಜರ್ಮನಿಯು ಮೂರಷ್ಟು ವಿಸ್ತಾರವಾಗಿದೆ.— ಎಂದು ಅಮೇರಿಕ ಮುಖ್ಯ ನಾಯಕರಾದ ಜನರಲ್ ಮಾರ್ಷಲ್ಲರು ಹೇಳಿಕೆ ಕೊಟ್ಟಿದಾರೆ.

ಂ ಂ

ಬರೋಡಾ ಮಹಾರಾಜರ ಮೊದಲ ರಾಣಿಯವಂಶದ ಶ್ರೀ ಶಾಂತಾದೇವಿಯವರು ಬರೋಡಾ ಸಂಸ್ಥಾನದ ಮಹಿಳಾ ಸಭಾ ಪ್ರಾರಂಭೋತ್ಸವವನ್ನು ನಡೆಸಿದ ಸಮಯದಲ್ಲಿ ಹೀಗೆಂದರು— ಹಿಂದಿನ 50 ವರ್ಷಗಳಿಂದ ಸ್ತ್ರೀ ಜನೋದ್ಧಾರಕ್ಕಾಗಿ ಅವಲಂಬಿಸಿದ ಸಂಸ್ಥಾನಗಳೂ, ಇನ್ನೂ ಅತ್ಯಗತ್ಯವಾಗಿ ಕಂಡುಬಂದಾಗ ಮಾಡಿದ ಪ್ರಯತ್ನಗಳೂ ಗರ್ವಿಸಲಾದ ವಿಷಯಗಳು. ಬ್ರಿಟಿಷ ಸಾಫಲ್ಯಕ್ಕೆ ಗೃಹವು ಅತ್ಯಂತಾವಶ್ಯಕವಾದದ್ದು. ಒಬ್ಬ ಒಳ್ಳೇ ತಾಯಿಯು 1000 ಮಂದಿ ಉಪಾಧ್ಯಾಯರಿಗೆ ಸಮಾನವುವು. ಈಗಿನ ಯುದ್ಧದಿಂದ ಸ್ತ್ರೀಯರು ತಮ್ಮ ಕೆಲಸಗಳಿಗಿಂತ ಗಂಡಸರ ಕೆಲಸಗಳನ್ನೂ ಕೂಡ ಧೈರ್ಯದಿಂದಲೂ ಪ್ರಶಂಸಾರ್ಹ ವಾಗಿಯೂ ಮಾಡಬಲ್ಲರೆಂದು ಸಿದ್ಧವಾಯಿತು.

ಂ ಂ

ಯುದ್ಧ ಗೆದ್ದಿದ್ದು ಮಿ | ಚರ್ಚಿಲ್ ರೊಬ್ಬರಿಂದಲ್ಲ, ಚರ್ಚಿಲ್ ಮತ್ತು ಕಂಪೆನಿಯವರಿಂದ, ಎಂದು ಲೇಬರ್ ಸದಸ್ಯರು ಲೀಸ್ಟರ್ ಪೌರಸಭೆಯವರು ಸಿವಿಕ್ ಮರ್ಯಾದೆ ಕೊಡದಂತೆ ಪೂಡಿದರು-

ಂ ಂ

ಯುದ್ಧಾನಂತರ ಮದರಾಸಿನಲ್ಲಿ ಕ್ಷಯ ರೋಗದ ಸ್ಯಾನಿಟೋರಿಯಂ ಕಟ್ಟಿಸಲು 20 ಕೋಟಿ ರೂ. ಯೋಜನೆಯನ್ನು ಸರ್ಕಾರದವರು ಮಾಡಿರುವರು.

ಂ ಂ

ಟೋಕಿಯೋ ಮೆಟ್ರೋಪಾಲಿಟನ್ ಅಸೆಂಬ್ಲಿಯಲ್ಲಿ ಒಬ್ಬ ಜಪಾನೀ ಮಂತ್ರಿಯು ಮತ್ತು ಜಪಾನೀ ವಿಧಿಮಂಡಲದ 14 ಮಂದಿ ಸಭಾಸದರು ಕೊಲ್ಲಲ್ಪಟ್ಟರೆಂದು ತಿಳಿಯುಬಂದಿದೆ.

ಎಂ || ರೂಸ್ವೆಲ್ಟರು ವಾಷಿಂಗ್ಟನ್ನಿನ ರೆಡ್ ಕ್ರಾಸ್ ಬಗ್ಗೆ ಮಾತನಾಡುತ್ತಾ ಯಾವಾಗ ಜಯವು ಲಭಿಸುವುದೋ ನನಗೆ ಗೊತ್ತಿಲ್ಲವೆಂದು ಹೇಳಿದರು.

ಂ ಂ

ಚೀನಾದಲ್ಲಿ ಬಂಗಾರದ ಹೊಸ ಡಾಲರುಗಳು ಉಪಯೋಗದಲ್ಲಿ ಬಂದಿರುವವು. ಅವುಗಳ ಮೇಲೆ ಚಿಯಾಂಗ ಕೈ ಷೇಕ ಮತ್ತು ರೂಸ್ವೆಲ್ಟರ ಚಿತ್ರಗಳಿರುವಂತೆ. ಆದು ಒಂದು ಔನ್ಸು ತೂಕದ್ದಿರುವುದಂತೆ.

ಂ ಂ

ಮದರಾಸಿನ ಲಕ್ಷ್ಮೀ ಕಾಂತಂ ಖೂನಿ ಮೊಖದ್ದಮೆಯಲ್ಲಿ ಸರ್ಕಾರಿ ಪರ ಕ್ರೌನ್ ಪ್ರಾಸಿಕ್ಯೂಟರ ಜೊತೆಯಲ್ಲಿ ಅಡ್ವೊಕೇಟ್ ಜನರಲರೂ ವಕಾಲತ್ತು ವಹಿಸುವರು.

ಂ ಂ

ಮದರಾಸಿನ 1945-46 ಬಡ್ಜೆಟ್ ಹೊರಬಿದ್ದಿತು. ಒಟ್ಟು ಉಳಿತಾಯ 80 ಲಕ್ಷ ರೂಪಾಯಿ. ಗತಸಾಲಿನಲ್ಲಿ ಶೇಂದಿಯಲ್ಲಿ 5 ವರೆ ಕೋಟಿ ರೂ. ಉತ್ಪತ್ತಿಯಾಯಿತು.

ಂ ಂ

ಇಂಗ್ಲೆಂಡಿನಲ್ಲಿ ವಾದ್ಯಗಳ ಸಮ್ಮೇಳನ ನಡೆಯಿತು. ಅಲ್ಲಿ ಕಾಲನಿಗಳಲ್ಲಿ ವರ್ಣಭೇದ ಮಾಡಬಾರದೆಂದು ತರಾವು ಆಯಿತು.

ಂ ಂ

ಮುಂಬೈನಲ್ಲಿ ಇನ್ನು ಮುಂದೆ ಬಟ್ಟೆ ರೇಷನಿಂಗ ! ಪ್ರತಿ 6 ತಿಂಗಳಿಗೆ ಗಂಡಸಿಗೆ ೧ ಜೊತೆ ಪಂಚೆ, ಹೆಂಗಸಿಗೆ ೧ ಜೊತೆ ಸೀರೆ.

ಂ ಂ

ಬಂಗಾಳಾ ಗೌರ್ನರರು ಮುಂದಿನ ವಾರ ಮದರಾಸಿಗೆ ಬಂದು ಅಲ್ಲಿ ಆಹಾರವು ಯಾವ ರೀತಿ ಸಂಜಲಾಗುತ್ತಿದೆ ಎಂಬುದನ್ನು ಮಂದಟ್ಟು ಮಾಡಿಕೊಳ್ಳಲಿರುವರು.

ಂ ಂ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ತಮ್ಮ ಬಿಡುಗಡೆ ವಿಷಯ ತಿಳಿದಾಗ, ತಾವೊಬ್ಬರೇ ಬಿಡುಗಡೆ ಆಗುವುದನ್ನು ಒಪ್ಪುವುದಿಲ್ಲವೆಂದು ಹೇಳಿದ್ದರಿಂದ, ಅವರ ಸಂಗಡ ಇದ್ದ ಇತರ ರಾಜಕೀಯ ಬಂಧಿತರೂ ಬಿಡುಗಡೆ ಮಾಡಲ್ಪಟ್ಟರು.

ವಿವಿಧ ವಿಷಯ

ಹಿಟ್ಲರನು 31 ವರ್ಷ ವೆಯಸ್ಸಿನ ನಟಿಯೊಂದಿಗೆ ಗುಟ್ಟಾಗಿ ಸಂಸಾರ ನಡಿಸುತ್ತಿದ್ದು, ಈಗ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದಿರುವನಂತೆ. ಒಂದು ಪುತ್ರ ಸಂತಾನವಾದನಂತರ ಈಕೆಯನ್ನು ಒಹಿಂಗವಾಗಿ ಮಾಡುವನಂತೆ!

ಂ ಂ

ಹಿಟ್ಲರು ಯುವಕ ಮುಖಂಡರನ್ನು ಬರಮಾಡಿಕೊಂಡು, ನಮಗೆ ಇಂಥಾ ಕ್ಲಿಷ್ಟ ಕಾಲವಾದರೂ ನಾವು ಟಳು ಶೀಲರಾಗುತ್ತೇವೆ, ಎಂದು ಹೇಳಿರುವುದಾಗಿ ಜರ್ಮನ್ ರೇಡಿಯೋ ತಿಳಿಸಿದೆ' ಈ ಮುಖಂಡರ ಪೈಕಿ 12 ವರ್ಷದ ಹುಡುಗನೊಬ್ಬನಿದ್ದನೆಂದೂ, ಅವನು ಯುದ್ಧದಲ್ಲಿ ಪ್ರಸಿದ್ಧಿಯಾಗಿರುವನೆಂದೂ ಹೇಳಲಾಗಿದೆ.

ಂ ಂ

ಅಮೇರಿಕಾದಲ್ಲಿ 1939 ಕ್ಕೂ, ಈಗಿರುವ ಇನ್‌ಕಂಟ್ಯಾಕ್ಸಿನ ದರಕ್ಕೂ ಶೇ ॥ 34 ರಷ್ಟು ಹೆಚ್ಚಿದೆ.

ಂ ಂ

ರಜ್ಯಾಸಂಗಡ ಸಂಧಾನ ನಡೆಸಲು ಜರ್ಮನರು ಮಾರ್ಷಲ್‌ಕಿಟವ್‌ರವರನ್ನು ಕಳಿಹಿಸುವವರಾಗಿರುವರು.

ಂ ಂ

ಭಾರತದಲ್ಲಿ 1090 ಸ್ತ್ರೀ ಸೆನ್ಸಾರುಗಳು ಇರುವುದಾಗಿ ಕೇಂದ್ರ ಸಭೆಯಲ್ಲಿ ತಿಳಸಲಾಯಿತು.

ಂ ಂ

ಬ್ರಿಟನ್ನಿನಲ್ಲಿ ಬೈದಿಯಾಗಿರುವ ಜರ್ಮನ್ ಹೆಸ್‌ರವರಿಗೆ ಬುದ್ಧಿಭ್ರಮಣೆಯಾಗಿದೆ.

ಂ ಂ

ಬೋರ್ಡೋ ಆಫ್ ದಿ ಸಾವಿಯಟ್ ಯೂನಿಯನ್ ಪ್ರಕಸ್ಯಿಯು 7744 ಮಂದಿಗೆ ಲಭಿಸಿದೆ. ಇವರಲ್ಲಿ 19 ಮಂದಿ ಮಹಿಳೆಯರು.

ಂ ಂ

ಮದ್ರಾಸಿನಲ್ಲಿ ಒಬ್ಬ ಗಡಿಯಾರದ ವರ್ತಕನು ಹೆಚ್ಚು ಬೆಲೆಗೆ ಗಡಿಯಾರ ಮಾರಿದ್ದಕ್ಕಾಗಿ ರೂ. 11700 ಜುಲ್ಮಾನೆ ವಿಧಿಸಲಾಗಿದೆ.

ಂ ಂ

ಯುದ್ಧಾನಂತರ ಬ್ರಿಟನ್ನಿಗೆ ಎಲ್ಲಾ ಪಂಗಡಗಳ ನ್ಯಾಷನಲ್ ಸರಕಾರವಾಗಬೇಕೆಂದು ಬ್ರಿಟಿಷ್ ಕಮ್ಯೂನಿಸ್ಟ್ ಪಾರ್ಟಿಯವರು ಒಕ್ಕೂರಲಿನಿಂದ ಒತ್ತಾಯಿಸುತ್ತಿದ್ದಾರೆ.

ಜೀವಿಸುವ ಹಕ್ಕು

ಈಚೆಗೆ ನಡೆದ ವಿಮಾನ ಸಂಚಾರ ಸಮ್ಮೇಳನದಲ್ಲಿ ಆಫ್ರಿಕಾದ ಜ ॥ ಸ್ಮಟ್ಸ್ ರವರು ಲೈಸೆನ್ಸಿಲ್ಲದೆ ಯಾರೂ ವಾಯು ಮಂಡಲದಲ್ಲಿ ಕಾರ್ಯಭಾಗ ನಡೆಸಬಾರದು; ವಾಯುಮಂಡಲವನ್ನು ಭೂಭಾಗದಹಾಗೆ ಹತೋಟಿಯಲ್ಲಿಟ್ಟರಬೇಕು, ಎಂದರು. ಇದನ್ನು ಕೇಳಿದರೆ ನಮಗೆ ಹಿಂದಿನ ಒಂದು ವಿಷಯವು ಜ್ಞಾಪಕಕ್ಕೆ ಬರುತ್ತದೆ. 1913 (?) ರಲ್ಲಿ ರಲ್ಲಿ ಇಂಗ್ಲೆಂಡಿನಲ್ಲಿ ಒಬ್ಬನು ಕುರಿ ಕಾಯುತ್ತಿದ್ದನು. ಆಗ ಒಂದು ವಿಮಾನದ ಆರ್ಭಟದಿಂದ ಅನೇಕ ಕುರಿಗಳು ಸೀರಿನ ಪಾಲಾದವು. ಕುರುಬನು ನಷ್ಟಕ್ಕೆ ವಿಮಾನದವನಮೇಲೆ ದಾವಾ ಹೂಡಿದನು. ನ್ಯಾಯಾಧೀಶರು 'ನಮಗೆ ಅಧಿಕಾರ ಭೂಮಿಯ ಮೇಲೆ ನಡೆಯುವ ವ್ಯಾಜ್ಯಗಳ ಮೇಲೆ ಮಾತ್ರ, ಅಂತರಿಕ್ಷ ವ್ಯಾಜ್ಯಗಳ ಅಧಿಕಾರ ಇನ್ನೂ ಬಂದಿಲ್ಲ ಎಂದು ಅರ್ಜಿ ವಜಾ ಮಾಡಿದರು.

ತುರ್ಕಿ ಮತ್ತು ಈಜಿಪ್ಟ್ ಜಪಾನಿನ ಮೇಲೆ ಯುದ್ಧ ಹೂಡಿದ್ದರಿಂದ ಜಪಾನೀಯರು ತಮ್ಮ ಮುಸ್ಲಿಂ ಜನಾಂಗದ ಮೇಲೆ ಈಗ ಹೆಚ್ಚು ಪ್ರೀತಿ ತೋರಿಸುತ್ತಿರುವರು.

ಂ ಂ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ದಕ್ಷಿಣ ಆಫ್ರಿಕಾ ಪ್ರತಿನಿಧಿಯಾಗಿ ಹೋಗುವ ಜ ॥ ಸ್ಮಟ್ಸ್‌ರೇ 'ಇದೇ ಕಡೇಯುದ್ಧವಾಗಬಹುದು' ಎಂದು ಅಲ್ಲಿಯ ಸಭೆಯಲ್ಲಿ ತಿಳಿಸಿದರು.

ಂ ಂ

ಜರ್ಮನ್ ಸೇನೆಗಳ ಮುಂದಾಳುಗಳು ಯಾರೂ ಹೇಡಿಗಳಾಗಿ ಓಡಿಹೋಗದೆ ಯುದ್ಧ ಮಾಡಬೇಕು, ಇಲ್ಲವಾದರೆ ಅವರನ್ನೆಲ್ಲಾ ಎರಡು ಗಂಟೆಯೊಳಗಾಗಿ ಗಲ್ಲಿಗೆ ಏರಿಸುವುದಾಗಿ ಹಿಟ್ಲರ್ ಆಜ್ಞೆ ಮಾಡಿದ್ದಾನೆ.

ಂ ಂ

ಅಮೇರಿಕಾದಲ್ಲಿ ಈಗ ಜನನವಾಗುವ ಮಕ್ಕಳುಗಳಲ್ಲಿ 6 ರಲ್ಲಿ ಒಂದು ಮಗುವು ಸರ್ಕಾರಿ ಪೋಷಣೆಯಲ್ಲಿ ಹುಟ್ಟಿ ಬೆಳೆಯುತ್ತದೆ. ಅಂದರೆ ಅದರ ಜನಕನು ರಣರಂಗದಲ್ಲಿರುವನು.

ಂ ಂ

ರಷ್ಯಾದಲ್ಲಿ ಆಹಾರ ಪರಿಸ್ಥಿತಿ ಚಿಂತಾಜನಕವಾಗಿದೆ.

ಜಾತೀಯ ಪ್ರಶ್ನೆ

ಇಂಡಿಯನ್ ರಿವ್ಯೂ ಪತ್ರಿಕೆಯಲ್ಲಿ ಸರ್ ಮಿರ್ಜಾರವರ ಹೇಳಿಕೆ

ಹಿಂದು ಮುಸ್ಲಿಮ್ ಸಮಸ್ಯೆಯು ಇಂದಿನ ನಮ್ಮ ಕಲಂಕಭರಿತ ತೊಂದರೆಯಾಗಿರುವುದು. ಬಗೆಹರಿಸಲಾಗದ ಸಮಸ್ಯೆಯು ಇದೆಂದು ನನಗೆ ಅನಿಸುವುದಿಲ್ಲ. ಕೆಲವೊಮ್ಮೆ ಈ ಕುರಿತು ನಮ್ಮಲ್ಲಿ ಅಂಜಿಕೆಯು ಉತ್ಪನ್ನವಾಗುವುದಾದರೂ ಈ ಅಂಜಿಕೆಯು ನಿರಾಧಾರವಾದದ್ದಿದೆ ಎಂದು ನಾನು ನನ್ನ ಇಂದಿನವರೆಗಿನ ಅನುಭವದಿಂದ ಹೇಳಲು ಶಕ್ತನಿರುವೆ. ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಐಕ್ಯತೆಯನ್ನು ಅಂತ್ಯದಲ್ಲಿ ಕಾಲವೂ ಜಾಗತಿಕ ಪರಿಸ್ಥಿತಿಯೂ ನಿಷ್ಕರ್ಷಿಸುವವು ಮತ್ತು ಸಾಧಿಸುವವು.

ಬ್ರಿಟಿಷರು ಹಿಂದುಸ್ಥಾನದ ರಾಜ್ಯಾಡಳಿತದ ವಿಷಯದಲ್ಲಿ ಗಳಿಗೂ ಇಂದಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದನ್ನು ನಾವು ಮರೆಯಬಾರದು. ಜಗತ್ತಿನ ಎಲ್ಲೆಡೆಗಳಲ್ಲಿಯೂ ಪರಿಸ್ಥಿತಿಗಳು ರೂಪಾಂತರ ಹೊಂದಿದೆ. ಮನುಷ್ಯರ ಭಾವನೆಗಳಲ್ಲಿ ಕೂಡ ಹೆಚ್ಚಿನ ಮಾರ್ಪಾಟು ಆಗಿರುವುದು. ಪುತ್ರರಂತೆ ತಿರುಗುವಂತೆ ನಮ್ಮಲ್ಲಾದರೂ ಪರಸ್ಪರ ವ್ಯವಸ್ಥಾಪನೆ ಯಾಗುವುದು ಅಪರಿಹಾರ್ಯವಿದೆ. ಇಂತಹ ಜಗತ್ತಿನಲ್ಲಿ ನಾವು ಬದುಕಿ ಬಾಳಬೇಕೆಂದು ಅತಿಸುವುದಾದರೆ ಪರಸ್ಪರ ವ್ಯವಸ್ಥಾಪನೆಯನ್ನು ಮಾಡಿಕೊಳ್ಳಲಿಕ್ಕೇ ಬೇಕು. ಆಂಗ್ಲ ವಿದ್ಯಾಭ್ಯಾಸವು ಬರಲೇಬೇಕಾಯಿತು. ಆಂಗ್ಲಭಾಷೆಯು ಇಂದು ಜಗತ್ತಿನ ಭಾಷೆಯಾಗುತ್ತಲಿದೆ.

ನಮ್ಮ ರಾಷ್ಟ್ರದ ಯುವಕರಿಗೆ ಕ್ರಮವಾದ ವಿದ್ಯಾವ್ಯಾಸಂಗವು ಸಿಗ್ಗಂತೆ ನೋಡುವುದು ನಮ್ಮ ಕರ್ತವ್ಯವಿದೆ ಈ ವಿದ್ಯಾಭ್ಯಾಸದ ಪರಿಣಾಮದಿಂದ ಅವರು ಉತ್ತಮ ಹಿಂದೀ ನಾಗರಿಕರಾಗಬೇಕು. ಅವರು ಈ ವಿದ್ಯಾರ್ಜನೆಯಿಂದಾಗಿ ಎಲ್ಲ ಪ್ರಶ್ನೆಗಳನ್ನೂ ಒಂದಾದ ಮಾತೃಭೂಮಿಯ ದೃಷ್ಟಿಯಿಂದ ನೋಡುವಂತಾಗಬೇಕಲ್ಲದೆ ತಂತಮ್ಮ ಜಾತೀಯ ಅಥವಾ ಪಂಗಡದ ದೃಷ್ಟಿಯಿಂದ ನೋಡುವಂತಾಗಬಾರದು. ಸಾರ್ವಜನಿಕ ವಿದ್ಯಾರ್ಥಿಭವನಗಳು ಮತ್ತು ಸಮಾನವಾದ ರಾಷ್ಟ್ರೀಯ ಆಕಾಂಕ್ಷೆಗಳು ಎಲ್ಲ ಪಂಗಡಗಳ ಯುವಕರನ್ನು ಒಂದುಗೂಡಿಸುವುವು.

ಲಕ್ಷ್ಮೀಕಾಂತಂಗೆ

ಇಂದೂ ನೇಷ್ಕ ಪತ್ರಿಕೆಯಿಂದ .... ಎತ್ತಿ ಬರೆದುದು ....

ಶ್ರೀರಂಗ ದೇವಸ್ಥಾನದ ವಂಶಪಾರಂಪರ್ಯ ಕೃಷ್ಣಯ್ಯಂಗಾರ್ ವಿಷಯವಾಗಿ ಏನನ್ನೂ ವೃತ್ತಪತ್ರಿಕೆಯಲ್ಲಿ ಬರೆಯುಬಾರದೆಂದೂ, ಅದಕ್ಕಾಗಿ 500 ರೂ. ಲಂಚ ಕೊಡುವುದಾಗಿಯೂ ಮದರಾಸು ಲಕ್ಷ್ಮೀಕಾಂತಂನ ಪತ್ರಿಕೆಯಾದ 'ಇಂದೂ ನೇಷ್ಕ' ಪತ್ರಿಕೆಗೆ ತಿಳಿಸಿದ್ದರು. ಇಂದೂ ನೇಷ್ಕ ಎಡಿಟರು ತಾವು ಈ ಲಂಚವನ್ನು ಸ್ವೀಕರಿಸುವುದಿಲ್ಲವೆಂದೂ, ಕೃಷ್ಣಯ್ಯಂಗಾರ್ಯರು ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳಬೇಕೆಂದೂ, ಇಲ್ಲವಾದರೆ ಇವರು ಇದುವರೆಗೆ ದೇವಸ್ಥಾನದಲ್ಲಿ ನಡೆಸಿದ ಚರಿತ್ರೆಯನ್ನು ಪೂರ್ತಿಯಾಗಿ ಪ್ರಕಟಿಸಲಾಗುವುದೆಂದೂ ತಿಳಿಯಪಡಿಸಿದ್ದುತ್ತಾರೆ.

ಂ ಂ

ಮೆದುರೈ ದೇವಸ್ಥಾನದ ರಾತ್ರಿ ಪೂಜೆಯೆಲ್ಲಾ ಮುಗಿಯಿತು. ಜಾತಕಂರೆಲ್ಲ ಅವರವರ ಮನೆಗಳಿಗೆ ಸೇರಿಕೊಂಡರು, 3-4 ಬಸ್ಸುಗಳಲ್ಲಿ ಯಾತ್ರಾರ್ಥಿಗಳು ಒಂದರು. ಪೇಷಕಾರರು 10 ರೂ. ತೆಗೆದುಕೊಂಡು ಅರ್ಚಕರಿಂದ ಬೇಗ ತೆಗಿಸಿ ಯಾತ್ರಾರ್ಥಿಗಳಿಗೆ ದೇವರ ಸೇವೆ ಮಾಡಿಸಿದರು. ಈ ಗುಟ್ಟು ಪೂರಸೇದಿನ ಮೇಲಧಿಕಾರಿಗಳಿಗೆ ತಿಳಿದು ಚಿಕ್ಕ ನೌಕರರಿಗೆಲ್ಲಾ ಜುಲ್ಮಾನೆ ಸಸ್ಪೆಂಡ್ ಆಯಿತು. ಪೇಷಕಾರರ ಗೋಜಿಗೆ ಯಾವ ಅಧಿಕಾರಿಯೂ ಹೋಗದಿರಲು ಕಾರಣವೇನು? (ಬಸ್ ನಂಬರು, ಚಿಲ್ಲರೆ ನೌಕರರ ಹೆಸರು ಇಲ್ಲಿ ಬಿಟ್ಟಿರುತ್ತೇವೆ.)

ಜಾತಿಯನ್ನು ತಿರಸ್ಕರಿಸಬೇಕಾದುದಿಲ್ಲ. ಆದರೆ ಸಾಮಾಜಿಕ ಹಾಗೂ ರಾಷ್ಟ್ರೀಯ ಜೀವನದಲ್ಲಿ ಜಾತೀಯ ಪ್ರಶ್ನೆಯು ಪ್ರಮುಖ ಸ್ಥಾನವನ್ನು ಆಕ್ರಮಿಸಬಾರದು. ರಾಷ್ಟ್ರೀಯತ್ವವು ಅದನ್ನು ಪಹಿಸಬೇಕು.

ಇಂದು ಜಾತೀಯ ವಾದವು ಅಂಗಾಲ್ಲಾ ವಿದ್ಯಾಭ್ಯಾಸವನ್ನು ಹೊಂದಿದ ಕೆಲವರಲ್ಲಿ ಮಾತ್ರ ಇರುವುದಲ್ಲದೆ ಜನ ಸಾಮಾನ್ಯರಲ್ಲಿರುವುದಿಲ್ಲ. ಇದು ಸೋಜಿಗವೆ. ಈ ವಿದ್ಯಾಭ್ಯಾಸವನ್ನು ಹೊಂದಿದವರು ಹಿಂದಿನದನ್ನು ಪುನರುತ್ಥಾನ ಮಾಡಲು ಯತ್ನಿಸುತ್ತಿರುವರು. ಇದರಿಂದಾಗಿ ತಮ್ಮನ್ನೂ ತಮ್ಮೊಂದಿಗೆ ಇತರರನ್ನೂ ಕಷ್ಟಪರಂಪರೆಗಳಿಗೆ ಗುರಿಪಡಿಸುತ್ತಿರುವರು. (ಹು. ಗೆ.)

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔಷಧದಂತೆ ಮಾಡಿಕೊಳ್ಳಿರಿ —

ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟ.ಜಿ. ಹಿಂಗನ್ನು ಸ್ವಲ್ಪವಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆ ಮೇಲೆ ಟ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ.

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಪಲಂಗಳಲ್ಲಿ ಎಲ್ಲಾ ವ್ಯಾಪಾರಗಾರರಲ್ಲೂ ಮತ್ತು ಈ ಕೆಳಗಿನ ವಿಳಾಸದವರಲ್ಲೂ ದೊರೆಯುವುದು.

ವಲ್ಲಭದಾಸ್ ತೇಜ್‌ಪಾಲ್,

ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಗಾರರು,

14 ಗೋವಿಂದಪ್ಪ ನಾಯಕ್ ಬೀದಿ, ಜಿ.ಟಿ. ಮದರಾಶ್.

ಶುದ್ಧವಾದದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 1|4 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟೆಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು- ಮತ್ತು, —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ ಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ್ ಬೀದಿ ಜಿ.ಟಿ. ಮದರಾಶ್.

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ಸನ್ಮಲ್ಲಿ ಬಟ್ಟೆ —

ಶ್ರೀ ಮಹಾಲಕ್ಷ್ಮಿ ಹಾಸ್

ಸಯ್ಯಾಜಿರಾವ್ ರಸ್ತೆ ಮೈಸೂರು

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ ಮೈಸೂರು

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೧೬೭ ಚಾಮರಾಜಪುರಂ ಮೈಸೂರು.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಆಮೋಘ 2 ನೇ ವಾರ

At Ranjit ❁ Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿ ದುನಿಯಾ

(ಹಿಂದಿ)

ನುಮ್ತಾಜ್ ಶಾಂತಿ ಮೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್

ಮೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahaadev

Opera Talkies, Mysore

Good Coffee

Sastry's Coffee Rooms

Chamarajapuram, Mysore

For Good Printing—

L. N. Press

Srirampet MYSORE

ಅಕ್ಕ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore